





ಇ–ವ್ಯಾಲೆಟ್‌ಗಳು ಖಾಲಿಯಾಗುವ ತನಕ ಅವಳು ಜೊತೆಯಲ್ಲಿರುತ್ತಾಳೆ. ಅಂದು ಒಬ್ಬಳಾದರೆ, ಇಂದು ನೀವು ಎಲ್ಲಿಗೆ ಹೋದರೂ ಅಲ್ಲೆಲ್ಲ ಶಾಪಿಂಗ್ ಪ್ರಲೋಭನೆಯ ಸುಂದರಿಯರು ನಮ್ಮ ನೆರಳಿನಂತೆಯೇ ಸುಳಿದಾಡುತ್ತಿರುತ್ತಾರೆ.

ಅಮೆಜಾನ್ ಅಥವಾ ಫ್ಲಿಪ್‌ಕಾರ್ಟ್‌ನಂಥ ಯಾವುದೋ ಇ–ಕಾಮರ್ಸ್ ಸೈಟ್‌ನಲ್ಲಿ ಯಾವಾಗಲೋ ಒಂದು ಸಲ ಯಾವುದೋ ವಸ್ತುವನ್ನು ಮೊಬೈಲ್‌ನಲ್ಲಿ ಹುಡುಕಿರುತ್ತೀರಿ. ಖರೀದಿಸುವ ಮನಸ್ಸು, ಕಾಸು ಇಲ್ಲದಿದ್ದರೂ ಕುತೂಹಲಕ್ಕಾಗಿ ಇ–ಕಾಮರ್ಸ್ ಸೈಟ್‌ಗಳಲ್ಲಿ ಹುಡುಕಿದ್ದರೂ ಕತೆ ಮುಗಿಯಿತು. ಆನ್‌ಲೈನ್‌ನಲ್ಲಿ ನೀವು ಎಲ್ಲಿಗೆ ಹೋದರೂ ನೀವು ಹುಡುಕಿದ್ದ ವಸ್ತುಗಳು ಹಿಂಬಾಲಿಸುತ್ತಲೇ ಇರುತ್ತವೆ. ಅದಕ್ಕೆ ಸಂಬಂಧಿಸಿದ ಪುಟಗಳು, ಜಾಹೀರಾತುಗಳು ತೆರೆದುಕೊಳ್ಳುತ್ತಲೇ ಇರುತ್ತವೆ. ಅಂದರೆ, ಕೊಳ್ಳುವಿಕೆಯ ಕುರಿತ ನಮ್ಮ ಮನಸ್ಸಿನಲ್ಲಿನ ಸುಪ್ತ ಬಯಕೆಗಳನ್ನು ಈ ಜಾಹೀರಾತುಗಳು ಪ್ರಚೋದಿಸುವ ಕೆಲಸ ಮಾಡುತ್ತವೆ.

ಈಗ ಏನನ್ನಾದರೂ ಖರೀದಿಸಲು ಇ–ಕಾಮರ್ಸ್ ಸೈಟ್‌ಗಳಿಗೇ ಹೋಗಬೇಕು ಅನ್ನುವುದೇನಿಲ್ಲ. ಫೇಸ್‌ಬುಕ್ ತೆರೆದರೆ ಅಲ್ಲೇ ಒಂದಷ್ಟು ಗಮನ ಸೆಳೆಯುವ ಜಾಹೀರಾತುಗಳು ಕಣ್ಣಿಗೆ ರಾಚುತ್ತವೆ. ಅಲ್ಲಿ ಕ್ಲಿಕ್ಕಿಸಿದರೆ ಅಮೆಜಾನ್, ಫ್ಲಿಪ್‌ಕಾರ್ಟ್ ಅಥವಾ ಇನ್ನಾವುದೋ ಇ–ಕಾಮರ್ಸ್ ಜಾಲತಾಣಕ್ಕೆ ನಮ್ಮನ್ನು ಕರೆದೊಯ್ಯುತ್ತವೆ. ನಮಗೆ ಏನು ಬೇಕು ಅನ್ನುವುದನ್ನು ನಮ್ಮ ಮನೆಯವರು, ಆಪ್ತರು, ಸ್ನೇಹಿತರು ಅರ್ಥ ಮಾಡಿಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ, ಇ–ಕಾಮರ್ಸ್ ಜಾಲತಾಣಗಳು ನಮಗಾಗಿಯೇ, ನಮ್ಮ ಸೇವೆಗಾಗಿಯೇ ಹುಟ್ಟಿರುವಂತೆ ಜೊತೆಯಲ್ಲೇ ಇರುತ್ತವೆ.

ಈಗಿನ ದಿನಗಳಲ್ಲಿ ಮೊಬೈಲ್ ಅನ್ನುವುದು ಕೈ, ಕಾಲು, ಕಿವಿ, ಮೂಗಿನಂತೆ ದೇಹದ ಒಂದು ಅವಯವವೇ ಆಗಿಬಿಟ್ಟಿದೆ. ಮೊಬೈಲನ್ನೂ ಸೇರಿಸಿ, ಪಂಚೇಂದ್ರಿಯಗಳ ಸಂಖ್ಯೆಯನ್ನು ಆರಕ್ಕೆ ಏರಿಸಬಹುದು! ಆಫೀಸ್, ಹೋಟೆಲ್, ರಸ್ತೆ, ಮನೆಯ ಬೆಡ್ ರೂಮ್, ಬಾತ್‌ರೂಮ್ ಹೀಗೆ ಎಲ್ಲ ಕಡೆಗೂ ಮೊಬೈಲ್‌ಗೆ ಮುಕ್ತ ಪ್ರವೇಶ. ಮೊಬೈಲ್‌ನಲ್ಲಿ ಸಿನಿಮಾ, ನ್ಯೂಸ್, ಯೂಟ್ಯೂಬ್, ಮ್ಯೂಸಿಕ್ ಕೇಳಲು ಯಾವುದೇ ತಾಣಕ್ಕೆ ಹೋದರೂ, ಇ–ಕಾಮರ್ಸ್ ಕಂಪನಿಗಳೇ ಸ್ವಾಗತಕಾರರಂತೆ ಕಾಣಿಸುತ್ತವೆ.

ಆನ್‌ಲೈನ್ ಶಾಪಿಂಗ್ ನಿಜಕ್ಕೂ ಒಂದು ಹಂತದ ತನಕ ಬಹಳ ಒಳ್ಳೆಯದು. ಆದರೆ, ಅದು ಗೀಳಾಗಿ ಅನೇಕರನ್ನು ಕಾಡುತ್ತಿದೆ. ಅಗತ್ಯವಿದೆಯೋ ಇಲ್ಲವೋ ಖರೀದಿ ಅನ್ನುವುದು ಊಟ, ತಿಂಡಿ, ಕಾಫಿ ಸೇವನೆಯಷ್ಟೇ ‘ನ್ಯೂ ನಾರ್ಮಲ್’ ಮತ್ತು ಸಲೀಸಾಗುತ್ತಿದೆ. ಮೊದಲು ಒಂದೆರಡು ಚಪ್ಪಲಿ ಇಟ್ಟುಕೊಳ್ಳುತ್ತಿದ್ದ ಹುಡುಗಿಯರು, ಈಗ 10–12 ಜೊತೆ ಚಪ್ಪಲಿಗಳನ್ನು ಮನೆಯ ಸ್ಟ್ಯಾಂಡ್‌ಗಳಲ್ಲಿ ಜೋಡಿಸುತ್ತಿದ್ದಾರೆ. ಮೊದಲು ಬಟ್ಟೆ ಖರೀದಿಸಲು ಹಬ್ಬವೋ, ಜನ್ಮದಿನವೋ ಒಂದು ನೆಪ ಬೇಕಾಗುತ್ತಿತ್ತು. ಈಗ ಆನ್‌ಲೈನ್‌ನಲ್ಲಿ ಕಂಡ ಡ್ರೆಸ್‌ಗಳನ್ನೆಲ್ಲ ಖರೀದಿಸುತ್ತಾ ವಾರ್ಡ್‌ರೋಬ್‌ಗಳಲ್ಲಿ ಮಾಸ್ಕ್ ಇಡಲೂ ಜಾಗವೇ ಇಲ್ಲದ ಸ್ಥಿತಿ ನಿರ್ಮಾಣ ಮಾಡುತ್ತಿದ್ದಾರೆ. ಹುಡುಗರೂ ಅಷ್ಟೇ ಜೀನ್ಸ್, ಟಿ–ಶರ್ಟ್, ಗ್ಯಾಜೆಟ್‌ಗಳು ಸೇರಿದಂತೆ ಸಿಕ್ಕಿದ್ದನ್ನೆಲ್ಲ ಮನೆಯಲ್ಲಿ ತುಂಬಿಸುತ್ತಿದ್ದಾರೆ. ಕೊಳ್ಳುಬಾಕ ಸಂಸ್ಕೃತಿಯು ಆನ್‌ಲೈನ್ ಶಾಪಿಂಗ್‌ನಿಂದ ಇನ್ನಷ್ಟು ಹಿಗ್ಗಿದೆ. ದುಡ್ಡಿರುವ ಮಂದಿ ಕೊಳ್ಳುತ್ತಾರೆ ಬಿಡಿ ಎಂದು